**ದಿನಾಂಕಃ 18-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಪಿ.ಆರ್.ಕೆ. ವಕೀಲರಿಂದಃ**

ನಾನು ಹೂಲಿಕಟ್ಟಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಮ್ಮ ಮನೆಯಲ್ಲಿ ಯಾರು ಯಾರು ವಾಸವಾಗಿದ್ರಿ ಎಂದರೆ ನಾನು ಮತ್ತು ನನ್ನ ಹೆಂಡತಿ ಮಕ್ಕಳು ವಾಸವಾಗಿದ್ದೇವೆ. ನನಗೆ ಮನೆ ನಂಬರು ಎನು ಎಂದು ಗೊತ್ತಿಲ್ಲ. ನಾನು ಹೂಲಿಕಟ್ಟಿ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ಆಧಾರ ಕಾರ್ಡಗಳನ್ನು ಪಡೆದುಕೊಂಡಿರುತ್ತೇನೆ ಅದನ್ನು ಹಾಜರುಪಡಿಸಿರುತ್ತೇನೆ. ಪಡಿತರ ಚೀಟಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಹೂಲಿಕಟ್ಟಿ ಗ್ರಾಮದಲ್ಲಿ ಮತ ಚಲಾಯಿಸಲು ಚುನಾವಣಾ ಗುರುತಿನ ಚೀಟಿ ಇದೆಯಾ ಎಂದರೆ ಇದೆ. ಮತದಾರರ ಚೀಟಿಯಲ್ಲಿ ಮನೆ ನಂಬರು ನಮೂದು ಆಗಿದೆಯಾ ಎಂದರೆ ನಮೂದು ಆಗಿದೆ.

2. ನನ್ನ ತಂದೆಯ ತಂದೆ(ತಾತನ) ಹೆಸರು ಎನು ಎಂದರೆ ರಾಮಪ್ಪ ಶಿವಮೊಗ್ಗಿ. ರಾಮಪ್ಪನ ತಂದೆ ಹೆಸರು ರಂಗಪ್ಪ ಎಂದರೆ ನನಗೆ ನೆನಪಿಲ್ಲ. ನನ್ನ ಮುತ್ತಾತ ರಂಗಪ್ಪನಿಗೆ ರಂಗಪ್ಪ, ನಾಗಪ್ಪ, ಹನುಮಂತಪ್ಪ 3 ಜನ ಮಕ್ಕಳು ಇದ್ದರು ಎಂದರೆ ಸರಿ. ರಾಮಪ್ಪ ಶಿವಮೊಗ್ಗಿ ರವರಿಗೆ ನನ್ನ ತಂದೆ ಹನುಮಂತಪ್ಪ ಹಾಗೂ ಇನ್ನೊಬ್ಬ ರಂಗಪ್ಪ (1 ನೇ ಪ್ರತಿವಾದಿ) ಇಬ್ಬರು ಆತನ ಮಕ್ಕಳು ಎಂದರೆ ನಿಜ. ನನ್ನ ಮುತ್ತಾತ ರಂಗಪ್ಪನ 2 ನೇ ಮಗ ನಾಗಪ್ಪನಿಗೆ ಗೌರಮ್ಮ ಹೆಂಡತಿ ಹಾಗೂ ಅಂಜನಮ್ಮ ಎಂಬ ಮಗಳು ಇದ್ದರು ಎಂದರೆ ನಿಜ. ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಸೇರಿಸಿದ್ದೀರಾ ಎಂದರೆ ಸೇರಿಸಿರುತ್ತೇನೆ. ನಾಗಪ್ಪನ ತಮ್ಮ ಹನುಮಂತಪ್ಪನಿಗೆ ಎಷ್ಟು ಜನ ಮಕ್ಕಳು ಎಂದರೆ ಇಬ್ಬರು ಮಕ್ಕಳು. ನನ್ನ ಮುತ್ತಾತ ರಂಗಪ್ಪನಿಗೆ ಬೀಮಪ್ಪ ಎಂಬ 4 ನೇ ಮಗ ಇದ್ದ ಎಂದರೆ ಇಲ್ಲ.

3. ನನ್ನ ಮುತ್ತಾತ ರಂಗಪ್ಪನಿಗೆ ಎಷ್ಟು ಆಸ್ತಿಗಳು ಇತ್ತು ಎಂದರೆ ನನಗೆ ಗೊತ್ತಿಲ್ಲ. ಹನುಮಂತಪ್ಪನ ಮಕ್ಕಳು ಈ ದಾವೆಯಲ್ಲಿ ಸೇರ್ಪಡೆಯಾಗಿದ್ದಾರೆಯೇ ಎಂದರೆ ಇಲ್ಲ. ನಾಗಪ್ಪ ಹಾಗೂ ಹನುಮಂತಪ್ಪ ರವರಿಗೆ ಬಂದಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಇಲ್ಲ. ರಾಮಪ್ಪ, ರಂಗಪ್ಪ, ಹನುಮಂತಪ್ಪ ಹಾಗೂ ನಾಗಪ್ಪನಿಗೆ ಯಾವ ಯಾವ ಆಸ್ತಿಗಳು ಬಂದಿತ್ತು ಎಂದು ಗೊತ್ತಿದೆಯಾ ಎಂದರೆ ಇಲ್ಲ. ರಾಮಪ್ಪ, ರಂಗಪ್ಪ, ಹನುಮಂತಪ್ಪ ಹಾಗೂ ನಾಗಪ್ಪ ರವರ ಹಿಸ್ಸೆಗೆ ಬಂದಿರುವಂತಹ ಆಸ್ತಿಗಳನ್ನು ವಹಿವಾಟು ಮಾಡುತ್ತಿದ್ದರು ಎಂದರೆ ನಿಜ. ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಸುಮಾರು 25 ವರ್ಷಗಳ ಹಿಂದೆ ರಾಣೇಬೆನ್ನೂರು ನ್ಯಾಯಾಲಯದಲ್ಲಿ ವ್ಯಾಜ್ಯಗಳು ನಡೆದುಕೊಂಡು ಬಂದಿದೆ ಎಂದರೆ ನಿಜ.

4. ದಾವಾ ಆಸ್ತಿ ಐಟೆಂ ನಂ.3 ಸರ್ವೆ ನಂ.51/2 ಪೈಕಿ 2 ಎಕರೆ 29 ಗುಂಟೆ ಪೂರ್ವ ಭಾಗದ್ದು ನಾಗಪ್ಪ ಹಾಗೂ ಆಂಜನವ್ವ ರವರಿಗೆ ವಾಟ್ನಿ ಪತ್ರದ ಪ್ರಕಾರ ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟೆಂ ನಂ.3 ಸರ್ವೆ ನಂ.51/2 ಪೈಕಿ 2 ಎಕರೆ 29 ಗುಂಟೆ ಮದ್ಯ ಭಾಗದ್ದು ತಿಪ್ಪಣ್ಣ ಹನುಮಂತಪ್ಪ ಶಿವಮೊಗ್ಗಿ ಹಾಗೂ ಹನುಮಂತಪ್ಪ ಹನುಮಂತಪ್ಪ ಶಿವಮೊಗ್ಗಿ ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟೆಂ ನಂ.3 ಸರ್ವೆ ನಂ.51/2 ಪೈಕಿ 2 ಎಕರೆ 29 ಗುಂಟೆ ನನ್ನ ದೊಡ್ಡಪ್ಪ ರಂಗಪ್ಪನ ಹೆಸರಿನಲ್ಲಿರುತ್ತದೆ ಎಂದರೆ ನಿಜ. ದಾವಾ ಆಸ್ತಿ ಐಟೆಂ ನಂ.3 ಸರ್ವೆ ನಂ.51/2 ರಲ್ಲಿ ಒಟ್ಟು 8 ಎಕರೆ 16 ಗುಂಟೆ ಹೇಗೆ ಬಂತು ಎಂದರೆ ಸರ್ಕಾರದಿಂದ ಉಚಿತವಾಗಿ ಬಂದಿದೆ. 8 ಎಕರೆ 16 ಗುಂಟೆ ಪೈಕಿ ನನ್ನ ದೊಡಪ್ಪ ರಂಗಪ್ಪ (1 ನೇ ಪ್ರತಿವಾದಿ) 2 ಎಕರೆ 29 ಗುಂಟೆ ಹೇಗೆ ಬಂತು ಎಂದರೆ ನನಗೆ ಗೊತ್ತಿಲ್ಲ.

5. ದಾವಾ ಆಸ್ತಿ ಐಟೆಂ ನಂ.1 1 ನೇ ಪ್ರತಿವಾದಿಗೆ ಹೇಗೆ ಬಂತು ಎಂದರೆ ಅದು ಸರ್ಕಾರದ ಜಮೀನು ಆಗಿದ್ದು ನನ್ನ ಅಜ್ಜನ ಕಾಲದಿಂದಲೂ ಬಂದಿರುತ್ತದೆ. ದಾವಾ 2 ನೇ ಆಸ್ತಿ 1 ನೇ ಪ್ರತಿವಾದಿಗೆ ಹೇಗೆ ಬಂತು ಎಂದರೆ ಅದು ಸರ್ಕಾರದಿಂದ ಬಂದಿರುತ್ತದೆ. ದಾವಾ ಆಸ್ತಿಗಳ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಇಲ್ಲ. ನನ್ನ ತಂದೆ ಶಿವಮೊಗ್ಗದಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿದ್ದರು ಎಂದರೆ ಸುಮಾರು 35 ವರ್ಷಗಳಿಂದ ವಾಸವಾಗಿದ್ದಾರೆ. ರಾಮಪ್ಪ ನನ್ನ ತಾತನಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದರೆ ನಿಜ. ಅವರು ಇವಾಗಲೂ ಬದುಕಿದ್ದಾರೆ ಎಂದರೆ ನಿಜ. ಹರಪನಹಳ್ಳಿ ರಂಗಮ್ಮ ಎಂಬುವವರು ಇದ್ದಾರೆ ಇನ್ನೊಬ್ಬಳು ಹನುಮಮ್ಮ ಧರ್ಮಸ್ಥಳದಲ್ಲಿ ವಾಸವಾಗಿದ್ದಾಳೆ. ಅವರನ್ನು ಈ ಕೇಸಿನಲ್ಲಿ ಸೇರಿಸಿದ್ದೀರಾ ಎಂದರೆ ಇಲ್ಲ. ನನ್ನ ತಂದೆ ಶಿವಮೊಗ್ಗದಲ್ಲಿ ಸುಮಾರು 60-70 ವರ್ಷಗಳಿಂದ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಶಿವಮೊಗ್ಗದಲ್ಲಿ ಮೃತಪಟ್ಟರು ಎಂದರೆ 1995 ರಲ್ಲಿ ಮೃತಪಟ್ಟಿದ್ದಾರೆ.

6. ನನ್ನ ತಂದೆಗೆ ನಮ್ಮನ್ನು ಬಿಟ್ಟು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿಯಲ್ಲ. ಇಬ್ಬರು ಹೆಣ್ಣು ಮಕ್ಕಳು ನನ್ನ ತಂದೆಯ ಕಾಲದಲ್ಲಿ ಶಿವಮೊಗ್ಗದಲ್ಲಿ ದುಡಿದು ಸಂಪಾಧನೆ ಮಾಡಿಕೊಂಡು ಒಂದು ಮನೆ ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಶಿವಮೊಗ್ಗದಲ್ಲಿ ನನ್ನ ತಂದೆಗೆ ಆಶ್ರಯ ಯೋಜನೆ ಅಡಿಯಲ್ಲಿ ಸರ್ಕಾರದಿಂದ ಮನೆ ಮಂಜೂರಾಗಿದೆ ಎಂದರೆ ಸರಿ. ಸದರಿ ಮನೆ 1983 ರಲ್ಲಿ ಮಂಜೂರು ಆಗಿದೆ. ನನ್ನ ತಂದೆ ಮನೆ ಮಂಜೂರು ಆಗುವುದಕ್ಕಿಂತ ಪೂರ್ವದಲ್ಲಿ 40 ವರ್ಷಗಳಿಂದ ವಾಸವಾಗಿದ್ದರು ಎಂದರೆ ನನ್ನ ತಂದೆ ಶಿವಮೊಗ್ಗಕ್ಕೆ ಹೋದ ಒಂದು ವರ್ಷಕ್ಕೆ ಮನೆ ಮಂಜೂರು ಆಗಿದೆ. ರಾಮಪ್ಪ ಹಾಗೂ

ಆತನ ಹೆಂಡತಿ ಹಾಗೂ ಮಗ ಶಿವಮೊಗ್ಗಕ್ಕೆ ಹೋಗಿ ಅಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ.

7. 1938 ರಲ್ಲಿ ಹನುಮಂತಪ್ಪ ಹಾಗೂ ಆತನ ಹೆಂಡತಿ ಮಗ ರವರಿಗೆ ನೀನು ಶಿವಮೊಗ್ಗದಲ್ಲಿ ವಾಸವಾಗಿರು ಹುಲಿಕಟ್ಟಿಗೆ ಬರುವುದು ಬೇಡ ಎಂದು ಸೋಡಾ ಚೀಟಿಯನ್ನು ಬಿಡುಗಡೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಅಂದಿನಿಂದ ಹನುಮಂತಪ್ಪ ಹಾಗೂ ರಂಗಪ್ಪನ ನಡುವೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನ್ನ ಮುತ್ತಾತ ರಂಗಪ್ಪನಿಗೆ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ರಂಗಪ್ಪ ಊರಿನ ಹಸುಗಳನ್ನು ಕಾಯುತ್ತಿದ್ದ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಮುತ್ತಾತ ರಂಗಪ್ಪ ಗೊಲ್ಲರ ರಂಗಪ್ಪ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿಯೂ ಶಿವಮೊಗ್ಗಿ ರಾಮಪ್ಪ ಗೊಲ್ಲರ ಎಂದು ಕರೆಯುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಿಗೂ ಹಾಗೂ ನನ್ನ ತಂದೆ ಹನುಮಂತನಿಗೂ ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಲ್ಲ.

8. ನಾನು ಮತ್ತು ನನ್ನ ಹೆಂಡತಿ ಮಕ್ಕಳು ಹಾಗೂ ನನ್ನ ಸಹೋದರ ಗಂಗಾಧರ ಎಲ್ಲರೂ ಹೂಲಿಕಟ್ಟಿ ಗ್ರಾಮದಲ್ಲಿ ವಾಸವಾಗಿರುತ್ತೇವೆ ಎಂದರೆ ನಿಜ. ಅದೇ ರೀತಿ ರಂಗಪ್ಪ ಹಾಗೂ ಆತನ ಹೆಂಡತಿ ಮಕ್ಕಳು ಹೂಲಿಕಟ್ಟಿ ಗ್ರಾಮದಲ್ಲಿ ಅವರ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ನಿಜ. ಅದೇ ರೀತಿ ನಾಗಪ್ಪ ಹಾಗೂ ಆತನ ಮಕ್ಕಳು ವಾಸವಾಗಿದ್ದಾರೆ ಎಂದರೆ ಅವರಿಗೆ ಮಕ್ಕಳು ಇಲ್ಲ ಮೃತಪಟ್ಟಿರುತ್ತಾರೆ. ಅದೇ ರೀತಿ ತಿಪ್ಪಣ್ಣ ಹನುಮಂತಪ್ಪ ಶಿವಮೊಗ್ಗಿ ರವರು ವಾಸವಾಗಿದ್ದಾರೆ ಎಂದರೆ ಇಲ್ಲ. ನಾವು 50-60 ವರ್ಷಗಳ ಕಾಲ ಶಿವಮೊಗ್ಗದಲ್ಲಿ ವಾಸವಾಗಿರುವ ಕಾರಣ ನಮ್ಮ ಕುಟುಂಬದ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.104/10 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದರೆ 6 ಎಕರೆ 6 ಗುಂಟೆ ಇದೆ. ಸರ್ವೆ ನಂ.104/10 ರಲ್ಲಿ ಎರಡು ಎಕರೆ 27 ಗುಂಟೆ ರಂಗಪ್ಪ ಶಿವಮೊಗ್ಗಿ ರವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಅದು ದಕ್ಷಿಣ ಭಾಗದ ಆಸ್ತಿ ಎಂದರೆ ನಿಜ.

9. ಅದೇ ರೀತಿ ತಿಪ್ಪಣ್ಣ ಹನುಮಪ್ಪ ಶಿವಮೊಗ್ಗಿ ಹಾಗೂ ಅವರ ತಮ್ಮ ಹನುಮಪ್ಪ ಹನುಮಪ್ಪ ಶಿವಮೊಗ್ಗಿ ರವರಿಗೆ 1 ಎಕರೆ 27 ಗುಂಟೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ನಾಗಪ್ಪ ರಂಗಪ್ಪ ಶಿವಮೊಗ್ಗಿ ರವರಿಗೆ ಸರ್ವೆ ನಂ.104/10 ರಲ್ಲಿ 1 ಎಕರೆ 26 ಗುಂಟೆ ಉತ್ತರ ದಿಕ್ಕಿನ ಆಸ್ತಿ ಬಂದಿತ್ತಾ ಎಂದರೆ ನಿಜ. ಈ ದಾವಾದಲ್ಲಿ ತಿಪ್ಪಣ್ಣ ಹನುಮಪ್ಪ ಶಿವಮೊಗ್ಗಿ, ಹನುಮಪ್ಪ ಹನುಮಪ್ಪ ಶಿವಮೊಗ್ಗಿ, ಆಂಜನಮ್ಮ ಕೋಂ ಸೋಮಪ್ಪ ಕುರುವತ್ತಿ ಇವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರ್ಪಡೆ ಮಾಡಿದ್ದೀರಾ ಎಂದರೆ ಇಲ್ಲ. ಇವರು ಮೂಲ ಪುರುಷ

ರಂಗಪ್ಪನ ವಾರಸುದಾರರು ಎಂದರೆ ಸರಿಯಲ್ಲ. ಪ್ರತಿವಾದಿ ರಂಗಪ್ಪ ಸರ್ವೆ ನಂ.104/10 ರಲ್ಲಿ ಅವರಿಗೆ ಬಂದಿರುವ ಹಿಸ್ಸೆಯ ಆಸ್ತಿಯನ್ನು ಹನುಮಪ್ಪ ತಂದೆ ಸಣ್ಣ ಅಡಿವೆಪ್ಪ ಬಣಕಾರ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಬಣಕಾರ ರವರು ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ಹನುಮಪ್ಪ ತಂದೆ ಸಣ್ಣ ಅಡಿವೆಪ್ಪ ಬಣಕಾರ ರವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿದ್ದೀರಾ ಎಂದರೆ ಇಲ್ಲ.

10. ಅದೇ ರೀತಿ ಪ್ರತಿವಾದಿ ಸರ್ವೆ ನಂ.104/10 ರಲ್ಲಿ ಇನ್ನೊಂದು ಆಸ್ತಿ 3 ಎಕರೆ 30 ಗುಂಟೆಯನ್ನು ಕೊಟ್ರೇಶ ಶಿವಾನಂದಪ್ಪ ಮುದ್ದಿ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಇಬ್ಬರು ಮಕ್ಕಳು ಅವರು ನಾಗರಾಜ ಹಾಗೂ ಆಂಜನಪ್ಪ ಇದ್ದರು ಎಂದರೆ ನಿಜ. ಈಗ ಅವರು ಇಬ್ಬರು ಮೃತಪಟ್ಟಿರುತ್ತಾರೆ. ಅದರಲ್ಲಿ ನಾಗರಾಜನಿಗೆ ಮದುವೆ ಆಗಿತ್ತು. ಪ್ರತಿವಾದಿ ಹಾಗೂ ಆತನ ಮಗ ನಾಗರಾಜ ದಾವಾ ಆಸ್ತಿಯಲ್ಲಿ ಕಮತ ಮಾಡಿ ಹಾಗೂ ಬ್ಯಾಂಕ್ ನಲ್ಲಿ ಬೋಜಾ ಮಾಡಿ ಹಣ ಪಡೆದುಕೊಂಡು ಟ್ರಾಕ್ಟರ್ ತೆಗೆದುಕೊಂಡು, ಬೋರ್ ಹಾಕಿಸಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಇಲ್ಲ. ದಾವಾ ಹಾಕುವುದಕ್ಕಿಂತ ಮೊದಲು ದಾವಾ ಆಸ್ತಿಗಳು ಎಲ್ಲೆಲ್ಲಿ ಇದ್ದವು ಎಂದು ನೋಡಿದ್ದೀರಾ ಎಂದರೆ ನೋಡಿರುತ್ತೇನೆ. ಆ ದಾವಾ ಹಾಕುವುದಕ್ಕಿಂತ ಮೊದಲು ಯಾರು ಯಾರಿಗೆ ಎಷ್ಟು ಆಸ್ತಿ ಹೋಗಿದೆ ಎಂದು ಉತಾರಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿಯೂ ಅವರದು ಅವರಿಗೆ ಇದೆ ನಮ್ಮದು ನಮಗೆ ಇದೆ. ಪ್ರತಿವಾದಿಗೆ ಹಿಸ್ಸೆಗೆ ಬಂದಿರುವ ಹಿಸ್ಸೆಯಲ್ಲಿ ಅವರು ಇದ್ದಾರೆ ನಮಗೆ ಬಂದ ಹಿಸ್ಸೆಯಲ್ಲಿ ನಾವು ಇದ್ದೇವೆ ಎಂದರೆ ಸರಿ.

11. ಅವರವರ ಹಿಸ್ಸೆಗೆ ಸಂಬಂದಪಟ್ಟಂತೆ ಡ ನಂಬರ 2438 ರಂತೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಡ ನಂಬರ್ ಮೇಲೆ ಪ್ರತಿವಾದಿಯ ಹೆಸರಿನಲ್ಲಿ ಬ್ಯಾಂಕ್ ನವರು ಸಾಲ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ರಂಗಪ್ಪನ ಮಗ ಆಂಜನಪ್ಪ ಟ್ರಾಕ್ಟರ್ ಅಪಘಾತದಲ್ಲಿ ಮೃತ ಪಟ್ಟ ಎಂದರೆ ನಿಜ. ಟ್ರಾಕ್ಟರ್ ರಂಗಪ್ಪನದು ಎಂದರೆ ನನಗೆ ಗೊತ್ತಿಲ್ಲ. ಆವಾಗ ನಾನು ಹೂಲಿಕಟ್ಟಿಯಲ್ಲಿ ಇದ್ದೇವು. ನಮ್ಮ ಮನೆ ಮತ್ತು ಪ್ರತಿವಾದಿಯ ಮನೆ ಎಷ್ಟು ದೂರದಲ್ಲಿದೆ ಎಂದರೆ ಒಂದು ಕಿ.ಮೀ ದೂರದಲ್ಲಿದೆ. ನಮ್ಮ ಮತ್ತು ಪ್ರತಿವಾದಿಯರ ನಡುವೆ ಸುಮಾರು 40 ವರ್ಷಗಳಿಂದ ಸಂಪರ್ಕ ಇಲ್ಲ ಎಂದರೆ ನಿಜ. ನಮಗೆ ದಾವಾ ಆಸ್ತಿಗಳಲ್ಲಿ ಹಿಸ್ಸೆ ಇಲ್ಲದಿದ್ದರೂ ಸಹ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ದೊಡ್ಡಪ್ಪನಿಗೆ ಜಮೀನು ಮಂಜೂರಾತಿ ಜಮೀನು ಎಂದರೆ ಸರಿಯಲ್ಲ.

12. ದಾವಾ ಆಸ್ತಿ 1 ಆಸ್ತಿಯನ್ನು ಪ್ರತಿವಾದಿ 1966 ರಲ್ಲಿ 600/- ರೂಗಳಿಗೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಕುರಿತು ಎ ಸಿ ಕೋರ್ಟನಲ್ಲಿ ಸಲ್ಲಿಸಿದ್ದ ನಮ್ಮ ಅರ್ಜಿ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ 80 ವರ್ಷದ ದೊಡಪ್ಪನ ವಿರುದ್ಧ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾವು ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದಲ್ಲಿ ಇದ್ದೀರಾ ಎಂದರೆ ಇಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.